ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 8.1.16

ಈ ವಾರದ ಮುನ್ಸೂಚನೆ (6-1-16 to 10.1.16 ವರೆಗೆ)

ನಿಯತಾಂಕಗಳು	9/1/16	10/1/16	11/1/16	12/1/16	13/1/16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	28	28	29
ಕನಿಷ್ಠ ಉಷ್ಣಾಂಶ (ಡಿ.ಸೆ.)	15	14	14	14	14
ಮೋಡ (ಪ್ರಮಾಣ)	0	0	0	1	0
ಅರ್ದ್ರತೆ ೭.೨೦ ಬೆ (ಶೇ)	67	63	67	69	68
ಅರ್ದ್ರತೆ ೨.೨೦ ಮ (ಶೇ)	52	51	50	52	53
ಗಾಳಿಯ ವೇಗ (ಕಿ.ಮಿ/ಗಂಟೆಗೆ)	2	4	4	2	4
ಗಾಳಿಯ ದಿಕ್ಕು (ಡಿಗ್ರಿ)	120	120	110	140	140

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ದಿನಗಳಲ್ಲಿಒಣಹವೆ ಮುಂದುವರೆಯಲಿದ್ದು, ದಿನದ ಗರಿಷ್ಠ ಉಷ್ಣಾಂಶವು **28-29°C** ಮತ್ತು ಕನಿಷ್ಠ **14-15°C** ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **63-69%** ಇದ್ದು, ಮಧ್ಯಾಹ್ನ **50-53 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2- 4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಕಟಾವು ಮಾಡಿರುವ ರಾಗಿ, ಜೋಳ ಮತ್ತು ಇತರೆ ಬೆಳೆಗಳನ್ನು ಚೆನ್ನಾಗಿ ಒಣಗಿಸಬೇಕು
- ✓ ಹಿಂಗಾರಿನಲ್ಲಿ ಬಿತ್ತನೆಯಾದ ಬೆಳೆಗಳಿಗೆ ನೀರು ಕೊಡಬೇಕು
- ✓ ಜಾನುವಾರು: ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು. ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ✓ ಕೊಯ್ಲು ಮಾಡಿದ ರಾಗಿ, ಜೋಳ ಇನ್ನಿತರ ಧಾನ್ಯಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಶುಚಿಗೊಳಿಸಿ ಶೇಖರಣೆ ಮಾಡುವುದು.
- ✓ ಗಾಳಿಯ ವೇಗ ಜಾಸ್ತಿಇರುವುದರಿಂದ ತರಕಾರಿಬೆಳೆಗಳಿಗೆ ನೆರವು ಕೊಟ್ಟು ನೆಲಕ್ಕೆ ತಾಕದಂತೆ ಎಚ್ಚರವಹಿಸಿ.

ಸಸ್ಯ ಸಂರಕ್ಷಣೆ:

- ✓ **ಟೊಮ್ಯಾಟೊ: ಅಂಗಮಾರಿ ರೋಗವಿದ್ದರೆ ಮೆಟಲಾಕ್ಸಿಲ್ (೨ಗ್ರಾಂ ಪ್ರತಿ ಲೀ ಗೆ) ಸಿಂಪಡಿಸಬೇಕು**
- ✓ **ರಸ ಹೀರುವ ಕೀಟಗಳು ಕಂಡು ಬಂದರೆ ಬೇವಿನ ಕಷಾಯ (ಶೇ.೫) ಅಥವಾ ಬೇವಿನ ಎಣ್ಣೆ ಅಥವಾ ಇಮಿಡಕ್ಲೋಪ್ರಿಡ್.**

ಮಾವಿನ ಬೆಳೆಗೆ ವಿಶೇಷ ಕೃಷಿ ಹವಾಮಾನ ಸಲಹೆಗಳು:

- ✓ ಕಳೆದ ಒಂದು ತಿಂಗಳಿನಿಂದ ಶುಷ್ಕ ವಾತಾವರಣವಿರುವುದರಿಂದ ಮಾವು ಬೆಳೆಯಲ್ಲಿ ಹೂ ಬಿಡುವ ಸಂಖ್ಯೆ ಹೆಚ್ಚಿದ್ದು ಮತ್ತು ಬೂದಿರೋಗದ ಸಂಭವ ಹೆಚ್ಚಾಗಿ ಕಂಡುಬಂದಿರುತ್ತದೆ.

- ✓ ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಕಂಡುಬರುವ ಜಿಗಿಹುಳು ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಡಾಸೈಯೋಲೋಥ್ರಿನ್ (5 ಇಸಿ) ಸಿಂಪಡಿಸಬೇಕು.

- ✓ ಜೊತೆಗೆ ಬೂದಿ ರೋಗದ ನಿಯಂತ್ರಣಕ್ಕಾಗಿ ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) 3ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.

- ✓ ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ.

- ✓ ಬದನಿಕೆ ಪರಾವಲಂಬಿ ಸಸ್ಯ ಬೆಳೆದಿರುವ ಕೊಂಬೆಯನ್ನು ಪೂರ್ತಿ ಕತ್ತರಿಸಿ ತೆಗೆಯಿರಿ. ಕತ್ತರಿಸಿದ ಭಾಗಕೆ ತಾಮ್ರದ ಆಕ್ಸಿ ಕ್ಲೋರೈಡ್ ಶಿಲೀಂಧ್ರನಾಶಕ ದ್ರಾವಣ ಅಥವಾ ಬೋರ್ಡೊ ಮುಲಾಮನ್ನು ಲೇಪಿಸಬೇಕು.

- ✓ ಮಾವಿನ ಮರದ ಕೆಳಗೆ ಬೆಳೆದಿರುವ ಕಳೆಗಿಡಗಳನ್ನು ಕಡಿದುಹಾಕಿ ಸ್ವಚ್ಚಗೊಳಿಸಬೇಕು.

- ✓ ಭೂಮಿಗೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ಮತ್ತು ರೋಗಗಳಿಂದ ರಕ್ಷಿಸುವುದು.

- ✓ ಮಾವಿನ ಗಿಡದ ಕೆಳಗೆ ಬೆಳೆದಿರುವ ಹುತ್ತಗಳನ್ನು ನಾಶಪಡಿಸಬೇಕು ಮತ್ತು ಗೆದ್ದಲು ಹುಳುಗಳನ್ನು ನಾಶಪಡಿಸಲು ಕ್ಲೋರೊಪೈರಿಫಾಸ್ 5–10 ಮಿ.ಲೀ/ಪ್ರತಿ ಲೀ ನಿರಿಗೆ ಬೆರಸಿ ಹುತ್ತಗಳಿಗೆ ಸುರಿಯಬೇಕು ಅಥವಾ ಒಂದು ಮೀಟರ್ ಸುತ್ತಳತೆ ಇರುವ ಹುತ್ತಕ್ಕೆ 2 ಅಲ್ಯೂಮಿನಿಯಂ ಪಾಸ್ಫೈಡ್ ಮಾತ್ರೆಗಳನ್ನು ಹಾಕಿ ಗಾಳಿ ಹೊರ ಹೋಗದಂತೆ ಎಲ್ಲಾ ರಂಧ್ರಗಳನ್ನು ಹಸಿ ಮಣ್ಣಿನಿಂದ ಮುಚ್ಚಬೇಕು.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು